# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್.,–10436/2019/ಡಿ.ಆರ್.ಇ–2 ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 18/02/2020

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ದೂರುದಾರರು ಆಪಾದಿಸಿರುವ ಬೈಕಂಪಾಡಿ ಕೈಗಾರಿಕಾ ಪ್ರದೇಶದ ರಸ್ತೆ ನಂ. 21, 22 ಹಾಗೂ ನಿವೇಶನ ಸಂಖ್ಯೆ: 447(ಬಿ) ಸುತ್ತಮುತ್ತಲಿನ ಸ್ಥಳದಲ್ಲಿಯ ಚರಂಡಿ ಮತ್ತು ಕಾಲುವೆಯಲ್ಲಿ ಕಸ ತುಂಬಿರುವುದನ್ನು ತೆರೆವುಗೊಳಿಸಿ, ಅವರು ಆಪಾದಿಸಿದಂತೆ ಕೃತಕ ನೆರೆ ಆಗುವುದನ್ನು ತಪ್ಪಿಸಿ ದೂರುದಾರರ ಕಾಂಪೌಂಡ್ ಒಳಗಡೆ ನೀರು ಹೋಗದಂತೆ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ದಿ.ತೋಮಸ್ ಲೋಬೊ ಬಿನ್ ಡೆನ್ನಿಸ ಆಲ್ಬರ್ಟ್ ಲೋಬೋ, ಮ್ಯಾನೇಜಿಂಗ್ ಪಾರ್ಟನರ್, ಮಂಗಳೂರು ಹ್ಯಾಂಡಿಕ್ರಾಫ್ಟ್ಸ್ ಮತ್ತು ಕಾರ್ವಿಂಗ್ ಇಂಡಸ್ಟ್ರೀಸ್, 447 ಬಿ, ಬೈಕಂಪಾಡಿ ಇಂಡಸ್ಟ್ರಿಯಲ್ ಏರಿಯ, ಬೈಕಂಪಾಡಿ, ನ್ಯೂ ಮಂಗಳೂರು–575001 (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಅಭಿವೃದ್ಧಿ ಅಧಿಕಾರಿ, ಕೆ.ಐ.ಎ.ಡಿ.ಬಿ., ಬೈಕಂಪಾಡಿ, ಮಂಗಳೂರು ತಾಲ್ಲೂಕು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತಮ್ಮ ಫ್ಯಾಕ್ಟರಿ ಎದುರಿನ ನೀರು ಹರಿಯುವ ಚರಂಡಿಯಲ್ಲಿ ಮತ್ತು ಕಾಲುವೆಯಲ್ಲಿ ಕಸ ತುಂಬಿ ನೀರು ಹರಿಯದೇ ದೊಡ್ಡ ಮಳೆ ಬಂದ ಸಂದರ್ಭದಲ್ಲಿ ಕಾಂಪೌಂಡ್

ಒಳಗೆ ನೀರು ತುಂಬಿರುತ್ತದೆ, ಇದರಿಂದಾಗಿ ತಮ್ಮ ಗ್ರಾಹಕರಿಗೆ ಕಿರಿಕಿರಿಯಾಗುತ್ತಿದ್ದು, ಈ ಬಗ್ಗೆ ಎದುರುದಾರರ ಗಮನಕ್ಕೆ ತಂದರೂ ಸಹಿತ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ತಮಗೆ ಆಗುತ್ತಿರುವ ತೊಂದರೆಯನ್ನು ಸರಿಪಡಿಸಬೇಕೆಂದು ಕೋರಿರುತ್ತಾರೆ.

3. ದೂರುದಾರರು ಸಲ್ಲಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿದೆ. ದೂರುದಾರರು ಸಲ್ಲಿಸಿರುವ ಛಾಯಾಚಿತ್ರಗಳನ್ನು ಪರಿಶೀಲಿಸಲಾಗಿ, ಕಟ್ಟಡಗಳ ಅಕ್ಕಪಕ್ಕ ನೀರು ನಿಂತಿರುವುದು ಕಂಡುಬರುತ್ತಿದ್ದು, ಅಲ್ಲಿ ಯಾವುದೇ ರಸ್ತೆ ಕಾಣುತ್ತಿಲ್ಲ, ಈ ಹಿಂದೆ ದೂರುದಾರರು ಎದುರುದಾರರಿಗೆ ಹಾಗೂ ಜಿಲ್ಲಾಧಿಕಾರಿಗಳವರಿಗೆ ತಮಗೆ ಆಗುತ್ತಿರುವ ತೊಂದರೆಯನ್ನು ಸರಿಪಡಿಸುವಂತೆ ಕೋರಿದ್ದರೂ ಸಹಿತ, ಅವರು ರಸ್ತೆಯ ಪಕ್ಕದಲ್ಲಿ ಇರುವ ಚರಂಡಿ ಮತ್ತು ಕಾಲುವೆಯಲ್ಲಿ ತುಂಬಿರುವ ಕಸವನ್ನು ತೆಗೆಯದೇ ಇರುವುದರಿಂದ ಹೂಳು ತುಂಬಿ ಅವರ ಕಾಂಪೌಂಡ್ ಒಳಗಡೆ ನೀರು ಹೋಗಿ ನಿಂತಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ, ಎದುರುದಾರರ ಆಕ್ಷೇಪಣೆ ಕೋರಲಾಗಿತ್ತು.

4. ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿ ಈಗಾಗಲೇ ಹಾಲಿ ಇರುವ ಊಳನ್ನು ತೆರೆವುಗೊಳಿಸಿ ಚರಂಡಿಯನ್ನು ಸ್ವಚ್ಛಗೊಳಿಸಲು ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ, ಅನುಮೋದನೆಗಾಗಿ ಮಂಡಳಿಯ ಕೇಂದ್ರ ಕಛೇರಿಗೆ ಸಲ್ಲಿಸಲಾಗಿದೆ. ಸದರಿ ಪ್ರಸ್ತಾವನೆ, ಅನುಮೋದನೆಯ ನಂತರ ಕಾರ್ಯಾದೇಶ ನೀಡಿದಲ್ಲಿ ಶೀಘ್ರದಲ್ಲಿ ಕಾಮಗಾರಿ ಕೈಗೊಳ್ಳಲಾಗುವುದು ಅಂತಾ ತಿಳಿಸಿದ್ದಾರೆ. ಆದರೆ, ಸೂಕ್ತ ಕ್ರಮವಾಗಿಲ್ಲ ಎಂಬುದು ಎದುರುದಾರರ ಆಕ್ಷೇಪಣೆಗಳಿಂದ ಕಂಡುಬರುತ್ತದೆ.

5. ದೂರುದಾರರು ಆಪಾದಿಸಿರುವ ಸ್ಥಳದಲ್ಲಿ ಚರಂಡಿ ಮತ್ತು ಕಾಲುವೆಯಲ್ಲಿ ಕಸ ತುಂಬಿರುವುದರಿಂದ ಸಹಜವಾಗಿ ದೊಡ್ಡ ಮಳೆ ಬಂದ ಸಂದರ್ಭದಲ್ಲಿ ಕಾಂಪೌಂಡ್ ಒಳಗೆ ನೀರು ಹೋಗುವ ಸಂದರ್ಭಗಳು ಒದಗಿ ಬರುವುದು ಮೇಲ್ನೋಟಕ್ಕೆ ಸತ್ಯವಾಗಿದೆ ಅಂತಾ ಕಂಡುಬರುತ್ತದೆ. ಈ ರೀತಿಯಾಗಿ ನೀರು ಬರುವುದರಿಂದ ಹಾಗೂ ಚರಂಡಿಗಳು ತುಂಬಿಕೊಂಡಿರುವುದರಿಂದ, ಮಲಿನ ಉಂಟಾಗಿ ಪರಿಸರ ಹಾಳಾಗುವ ಸಾಧ್ಯತೆಗಳು ಸಹಿತ ಹೆಚ್ಚಾಗಿರುತ್ತದೆ. ದೂರುದಾರರು ದಿನಾಂಕ: 27/11/2009, 24/07/2014 ರಂದು ಎದುರುದಾರರಿಗೆ ತಮಗೆ ಆಗುವ ತೊಂದರೆಯನ್ನು

ಪರಿಹರಿಸುವಂತೆ ಪತ್ರ ಬರೆದು ಕೋರಿಕೊಂಡಿದ್ದಾರೆ, ಎದುರುದಾರರಿಗೆ ಅಲ್ಲದೇ, ದಿನಾಂಕ: 13/08/2009 ರಂದು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರಿಗೆ ಪತ್ರ ಬರೆದು ಮನವಿ ಸಲ್ಲಿಸಿದ್ದಾರೆ. ಆದರೂ ಸಹಿತ ಅವರ ಕುಂದುಕೊರತೆ ನಿವಾರಣೆಯಾಗಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ದೂರುದಾರರು ಆಪಾದಿಸಿರುವ ಬೈಕಂಪಾಡಿ ಕೈಗಾರಿಕಾ ಪ್ರದೇಶದ ರಸ್ತೆ ನಂ. 21, 22 ಹಾಗೂ ನಿವೇಶನ ಸಂಖ್ಯೆ: 447(ಬಿ) ಸುತ್ತಮುತ್ತಲಿನ ಸ್ಥಳದಲ್ಲಿಯ ಚರಂಡಿ ಮತ್ತು ಕಾಲುವೆಯಲ್ಲಿ ಕಸ ತುಂಬಿರುವುದನ್ನು ತೆರೆವುಗೊಳಿಸಿ, ಅವರು ಆಪಾದಿಸಿದಂತೆ ಕೃತಕ ನೆರೆ ಆಗುವುದನ್ನು ತಪ್ಪಿಸಿ ದೂರುದಾರರ ಕಾಂಪೌಂಡ್ ಒಳಗಡೆ ನೀರು ಹೋಗದಂತೆ ಕ್ರಮ ಜರುಗಿಸಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18.2.20.

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.